**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ.**

ಶ್ರೀಯುತ ಃ **ಎಂ.ಹೆಚ್. ಅಣ್ಣಯ್ಯನವರ**

ಬಿಕಾಂ.ಎಲ್.ಎಲ್.ಬಿ. (ವಿಶೇಷ)

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ದಾವಣಗೆರೆ.

**ದಿನಾಂಕ ಃ 25 ನೇ ಫೆಬ್ರವರಿ ಮಾಹೆ 2025**

**ಎಸ್.ಸಿ. ಸಂಖ್ಯೆ 94/2023**

**ಫಿರ್ಯಾದುದಾರರು ಃ-**

ಕರ್ನಾಟಕ ಸರ್ಕಾರದ ಪರವಾಗಿ

ಹೊನ್ನಾಳಿ ಪೊಲೀಸಠಾಣೆ, ದಾವಣಗೆರೆ.

**(ಸರ್ಕಾರಿ ಅಭಿಯೋಜಕರು ಪ್ರತಿನಿಧಿಸುತ್ತಾರೆ)**

// ವಿರುದ್ಧ //

**ಆರೋಪಿ/ತರು ಃ-**

1. ನಸ್ರುಲ್ಲಾ ಯಾನೇ ಮೊಹಮ್ಮದ್ ನಸ್ರುಲ್ಲಾ ಬಿನ್ ಲೇಟ್ ಅಬ್ದುಲ್ಲಾ ಲತೀಫ್, ವಯಸ್ಸು 21 ವರ್ಷ, ಕೂಲಿ ಕೆಲಸ, ವಾಸ 2 ನೇ ಕ್ರಾಸ್, ದುರ್ಗಿಗುಡಿ ಉತ್ತರ, ಹೊನ್ನಾಳಿ ಟೌನ್, ದಾವಣಗೆರೆ.
2. ಮನ್ಸೂರ್ ಬಿನ್ ಲೇಟ್ ಯೂಸೂಫ್, ವಯಸ್ಸು 30 ವರ್ಷ, ಕೂಲಿ ಕೆಲಸ, ವಾಸ ಕಾಜಿಮೊಹಲ್ಲಾ, ಹೊನ್ನಾಳಿ

ಟೌನ್, ದಾವಣಗೆರೆ.

**(ಪರವಾಗಿ ಃಶ್ರೀ ಕೆ.ಎನ್.ಆರ್./ಎಸ್.ಎಂ.ಎಲ್. ವಕೀಲರು)**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 216 ರಡಿಯ ಅರ್ಜಿಯ ಮೇಲೆ ಆದೇಶ**

1. 2 ನೇ ಆರೋಪಿ ಪರ ವಕೀಲರು ಮಾನ್ಯ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ, ಹೊನ್ನಾಳಿ ಪೊಲೀಸಠಾಣೆ ಅಧಿಕಾರಿಯವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 302, 323, 324, 504, 506 ರಡಿಯಲ್ಲಿ ದೋಷಾರೋಪಣ ಪಟ್ಟಿ ಸಲ್ಲಿಸಿದ್ದು, ಸದರಿ ಪ್ರಕರಣದಲ್ಲಿ ದೋಷಾರೋಪಣೆ ರಚನೆ ಮಾಡಿ ಪ್ರಾಸಾ.1 ರಿಂದ 8 ಅಂತ ವಿಚಾರಣೆ ಮಾಡಲಾಗಿದ್ದು, ಸದರಿ ಅರ್ಜಿ ಮೇಲೆ ಭಾರತೀಯ ದಂಡ ಸಂಹಿತೆ ಕಲಂ 302 ಕಾನೂನು ಅನ್ವಯವಾಗುವುದಿಲ್ಲ. ಆದ್ದರಿಂದ ಸದರಿ ದೋಷಾರೋಪಣೆಯನ್ನು 304(II) ರಡಿಯಲ್ಲಿ ದೋಷಾರೋಪಣೆ ಬದಲಾವಣೆ ಮಾಡಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ.

2. ಸದರಿ ಅರ್ಜಿಗೆ ಸರ್ಕಾರಿ ಅಭಿಯೋಜಕರು ತಕರಾರು ಸಲ್ಲಿಸಿ, ಅರ್ಜಿಯಲ್ಲಿ ಬರೆದ ವಿಷಯಗಳು ಸುಳ್ಳಿನಿಂದ ಕೂಡಿದ್ದು, ಭಾರತೀಯ ದಂಡ ಸಂಹಿತೆ ಕಲಂ 302 ರಡಿಯಲ್ಲಿ ಆರೋಪಿತರಿಬ್ಬರೂ ಸೇರಿಕೊಂಡು ಫಾರುಕ್ ವುಲ್ಲಾ ಈತನನ್ನು ಕೊಲೆ ಮಾಡಿದ್ದು, ಭಾರತೀಯ ದಂಡ ಸಂಹಿತೆ ಕಲಂ 302 ಅನ್ವಯವಾಗುವುದರಿಂದ ನ್ಯಾಯಾಲಯವು ದೋಷಾರೋಪಣೆ ರಚನೆ ಮಾಡಿದ್ದು ಸಮರ್ಪಕವಾಗಿರುತ್ತದೆ. ಆದ್ದರಿಂದ ಅರ್ಜಿಯನ್ನು ವಜಾ ಮಾಡಬೇಕೆಂದು ತಕರಾರು ಸಲ್ಲಿಸಿರುತ್ತಾರೆ.

3. ಅರ್ಜಿ ತಕರಾರು ಪರಿಶೀಲಿಸಲಾಗಿ, ಮಾನ್ಯ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಚರ್ಚೆಗೆ ಬಂದಿರುತ್ತವೆಃ–

**ಅಂಶ 1** ಃಆರೋಪಿ ಪರ ವಕೀಲರು ಸಲ್ಲಿಸಿದ ದಂಡ ಪ್ರಕ್ರಿಯಾ ಸಂಹಿತೆ ಕಲಂ 216 ರಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಬಹುದೇ?

**ಅಂಶ 2** ಃಯಾವ ಆದೇಶ ?

4. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆಃ–

ಅಂಶ ನಂ.1 ಃ– ನಕಾರಾತ್ಮಕವಾಗಿ

ಅಂಶ ನಂ.2 ಃ– ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ ಃ

**ಃ ಕಾರಣಗಳು ಃ**

5. **ಅಂಶ 1 ಃ–** ಅರ್ಜಿ, ತಕರಾರು, ಉಭಯ ವಕೀಲರ ವಾದವನ್ನು ಪರಿಶೀಲಿಸಲಾಗಿ, ಪೊಲೀಸರಿಗೆ ತನಿಖೆ ಮಾಡಿ ಸಲ್ಲಿಸಿದ ದೋಷಾರೋಪಣೆ ಪಟ್ಟಿಯನ್ನು ಪರಿಶೀಲಿಸಲಾಗಿ, ದಿನಾಂಕಃ16/03/2023 ರಂದು 2 ನೇ ಆರೋಪಿಯ ಹುಟ್ಟು ಹಬ್ಬದ ಪಾರ್ಟಿಗೆಂದು ಎರಡೂ ಜನ ಆರೋಪಿತರು ಮತ್ತು ಚಾಸಾ.10 ರಿಂದ 18 ರವರುಗಳು ಸೇರಿಕೊಂಡು ಹೊನ್ನಾಳಿ ತಾಲ್ಲೂಕು, ಗೊಲ್ಲರಹಳ್ಳಿ ಗ್ರಾಮದ ಪ್ರಕಾಶ್‌ರವರ ಮೆಕ್ಕೆಜೋಳದ ಬೆಳೆಯಿರುವ ಜಮೀನಿನ ಕೆಳಗೆ ಹಾದು ಹೋಗಿರುವ ತುಂಗಾಭಧ್ರಾ ನದಿಯ ತೀರದ ನಿರ್ಜನ ಪ್ರದೇಶಕ್ಕೆ ಅದೇ ದಿನ ರಾತ್ರಿ 8–00 ಗಂಟೆ ಸಮಯಕ್ಕೆ ಹೋಗಿ ಸ್ಥಳಕ್ಕೆ ಚಿಕನ್ ಬಿರಿಯಾನಿಯನ್ನು ಪಾರ್ಸಲ್ ತರಿಸಿಕೊಂಡು ನಂತರ ರಾತ್ರಿ 9–30 ಗಂಟೆ ಸಮಯದಲ್ಲಿ 2 ನೇ ಆರೋಪಿ ಬರ್ತಡೇ ಕೇಕನ್ನು ಕಟ್ ಮಾಡಿದ್ದು, 1 ನೇ ಆರೋಪಿತನು ಹಾಡು ಕೇಳಲೆಂದು ಚಾಸಾ.10 ರವರ ಮೊಬೈಲ್ ಫೋನನ್ನು

ಪಡೆದು ಎಲ್ಲರೂ ಹಾಡು ಕೇಳುತ್ತಾ ಚಿಕನ್ ಬಿರಿಯಾನಿ ತಿಂದು ಪಾರ್ಟಿಗೆ ಹೋಗಿದ್ದವರೆಲ್ಲರೂ ವಾಪಾಸ್ಸು ಮನೆಗೆ ಹೋಗುತ್ತಿದ್ದು, ಚಾಸಾ.10 ರವರು 1 ನೇ ಆರೋಪಿತನಿಗೆ ತನ್ನ ಮೊಬೈಲ್ ಕೊಡು ಅಂತ ಕೇಳಿದಾಗ 1 ನೇ ಆರೋಪಿತನು ಫೋನ್ ಕೊಡದೇ ಬೆಳಿಗ್ಗೆ ಕೊಡುತ್ತೇನೆ ಹೋಗು ಅಂತ ಸತಾಯಿಸಿದ್ದಕ್ಕೆ ಚಾಸಾ.10 ರವರು ಸಹ ಅಲ್ಲಿಂದ ವಾಪಾಸ್ಸು ಮನೆಗೆ ಹೊರಟಿದ್ದು, ನಂತರ ರಾತ್ರಿ 11-17 ಗಂಟೆ ಸಮಯದಲ್ಲಿ ಚಾಸಾ.10 ರವರ ತಂದೆ ಚಾಸಾ.19 ರವರಿಗೆ ವಿಚಾರ ತಿಳಿದು ಚಾಸಾ.10 ರವರ ಮೊಬೈಲಿಗೆ ಕರೆ ಮಾಡಿ ನನ್ನ ಮಗನ ಮೊಬೈಲ್ ಫೋನ್‌ನ್ನು ಏಕೆ ವಾಪಾಸ್ಸು ಕೊಡಲಿಲ್ಲ ಎಂದು ಕೇಳಿದ್ದಕ್ಕೆ 1 ಮತ್ತು 2 ನೇ ಆರೋಪಿತರು ಚಾಸಾ.19 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಫೋನ್ ಕೊಡಲ್ಲ ಧಮ್ ಇದ್ದರೆ ಇಲ್ಲಿಗೆ ಬರ್ರಿ ಎಂದು ಬೈದಿದ್ದು, ಚಾಸಾ.19 ರವರು ಚಾಸಾ.10 ರವರೊಂದಿಗೆ ಫಾರುಕ್ ವುಲ್ಲಾ ಮತ್ತು ಚಾಸಾ.9 ರವರನ್ನು ಜೊತೆ ಮಾಡಿ ದಿಃ17/03/2023 ರಂದು ಮಧ್ಯರಾತ್ರಿ 12-30 ಗಂಟೆ ಸಮಯದಲ್ಲಿ ಆರೋಪಿತರಿದ್ದ ಸ್ಥಳ ಗೊಲ್ಲರಹಳ್ಳಿ ಗ್ರಾಮದ ಪ್ರಕಾಶರವರ ಮೆಕ್ಕೆಜೋಳದ ಜಮೀನಿನ ಕೆಳಗೆ ಹಾದುಹೋಗಿರುವ ತುಂಗಾಭದ್ರಾ ನದಿಯ ತೀರದ ನಿರ್ಜನ ಪ್ರದೇಶಕ್ಕೆ ಕಳುಹಿಸಿದ್ದು, ಚಾಸಾ.9 ರವರು 1 ನೇ ಆರೋಪಿಗೆ ಚಾಸಾ.10 ರವರ ಮೊಬೈಲ್ ಫೋನ್ ವಾಪಾಸ್ಸು ಕೊಡು ಎಂದು ಕೇಳಿದ್ದಕ್ಕೆ 1 ನೇ ಆರೋಪಿತನು ಅವಾಚ್ಯವಾಗಿ ಬೈದಿದ್ದು, ಏಕೆ ಬೈಯುತ್ತಿರಾ ಎಂದು ಫಾರುಕ್ ವುಲ್ಲಾರವರು ಕೇಳಿದ್ದಕ್ಕೆ 1 ನೇ ಆರೋಪಿತನು ಫಾರುಕ್ ವುಲ್ಲಾರವರಿಗೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಏಕಾ ಏಕಿ ತನ್ನ ಬಳಿಯಿಂದ್ದ ಚಾಕುವಿನಿಂದ ಫಾರುಕ್ ವುಲ್ಲಾನ ಎಡಕುತ್ತಿಗೆಯ ಕೆಳಭಾಗಕ್ಕೆ ಬಲವಾಗಿ ಚುಚ್ಚಿ ರಕ್ತಗಾಯಪಡಿಸಿದನು ಆಗ ಬಿಡಿಸಲು ಹೋದ ಚಾಸಾ.10 ರವರಿಗೆ 2 ನೇ ಆರೋಪಿ ತನ್ನ ಕೈ ಮುಷ್ಟಿ ಮಾಡಿ ಬಲಗಣ್ಣಿಗೆ ಹಾಗೂ ಎದೆಗೆ ಗುದ್ದಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ತನ್ನ ಬಳಿಯಿದ್ದ ಚಾಕುವಿನಿಂದ ಫಾರೂಕ್ ವುಲ್ಲಾನ ಬಲಭುಜದ ಹಿಂಭಾಗಕ್ಕೆ

ಚುಚ್ಚಿ ರಕ್ತಗಾಯಪಡಿಸಿದ್ದು, ಫಾರುಕ್ ವುಲ್ಲಾನು ಅತೀವ ರಕ್ತಸ್ರಾವದಿಂದ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾನೆ ಆದ್ದರಿಂದ ಆರೋಪಿತರ ಮೇಲೆ ಭಾರತೀಯ ದಂಡ ಸಂಹಿತೆ ಕಲಂ 323, 324, 302, 504, 506 ಸಹ ಕಲಂ 34 ರಡಿಯಲ್ಲಿ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತಾರೆ.

6. ಈ ಅಂಶ ಪರಿಶೀಲಿಸಲಾಗಿ, 16/03/2023 ರಂದು 2 ನೇ ಆರೋಪಿಯ ಹುಟ್ಟು ಹಬ್ಬ ಆಚರಣೆ ಮಾಡುತ್ತಿದ್ದು, 2 ನೇ ಆರೋಪಿ ಕೇಕ್ ಕಟ್ ಮಾಡುತ್ತಿದ್ದಾಗ 1 ನೇ ಹಾಡು ಹಾಕಲು ಚಾಸಾ.10 ರವರ ಮೊಬೈಲ್ ಫೋನನ್ನು ಪಡೆದುಕೊಂಡಿದ್ದು, ಆ ಮೊಬೈಲನ್ನು ವಾಪಾಸ್ಸು ಕೊಡದೇ ಮನೆಗೆ ಹೋಗಿದ್ದು, ಪುನಃ ಅವರ ತಂದೆ ಮೊಬೈಲ್ ಕೊಡು ಅಂತ ಕೇಳಿದಾಗ ಅವಾಚ್ಯ ಶಬ್ದಗಳಿಂದ ಬೈದಿದ್ದು, ನಂತರ ಮಾರನೇ ದಿವಸ ದಿಃ17/03/2023 ರಂದು 1 ನೇ ಆರೋಪಿ ಮೃತ ಫಾರುಕ್ ವುಲ್ಲಾ ಈತನಿಗೆ, ನಿನಗೆ ಜೀವ ಸಹಿತ ಬಿಡುವುದಿಲ್ಲ ಅಂತ ಏಕಾ ಏಕಿ ತನ್ನ ಬಳಿ ಇರುವ ಚಾಕುವಿನಿಂದ ಚುಚ್ಚಿ ಕೊಲೆ ಮಾಡಿದ್ದನ್ನು ಪರಿಶೀಲಿಸಲಾಗಿ, ದಿಃ16/03/2023 ರಂದು ಹುಟ್ಟು ಹಬ್ಬ ಆಚರಣೆಯಾಗಿದ್ದು, ಮೊಬೈಲ್ ಕೇಳಿದಾಗ ಅವಾಚ್ಯ ಶಬ್ದಗಳಿಂದ ಬೈದು ಗಲಾಟೆಯಾಗಿದ್ದು, ಅದೇ ದ್ವೇಷ ಇಟ್ಟುಕೊಂಡು 1 ನೇ ಆರೋಪಿ ತನ್ನ ಬಳಿ ಚಾಕು ಇಟ್ಟುಕೊಂಡು ಆರೋಪಿತರು ಇಬ್ಬರೂ ಸೇರಿಕೊಂಡು ಮೃತ ಫಾರುಕ್ ವುಲ್ಲಾ ನನ್ನು ಕೊಲೆ ಮಾಡಬೇಕೆಂಬ ಉದ್ದೇಶದಿಂದ ಚಾಕುವಿನಿಂದ ಚುಚ್ಚಿ ಕೊಲೆ ಮಾಡಿದ್ದರ ಬಗ್ಗೆ ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಈ ಕೊಲೆ ಮಾಡುವ ಬಗ್ಗೆ ದಿಃ16/03/2023 ರಂದು ಫೋನ್ ಕೇಳಿದಾಗ ಗಲಾಟೆಯಾಗಿದ್ದು, ಆ ಗಲಾಟೆಯಿಂದ ಮಾರನೇ ದಿವಸ ಕೊಲೆ ಮಾಡಬೇಕೆಂಬ ಉದ್ದೇಶದಿಂದ ಆರೋಪಿತರು ಚಾಕುವನ್ನು ತಮ್ಮ ಬಳಿ ಇಟ್ಟುಕೊಂಡಿರುತ್ತಾರೆ. ಕೊಲೆ ಮಾಡಲು ತಯಾರಿ ಮಾಡಿಕೊಂಡಿರುತ್ತಾರೆ. ಕೊಲೆ ಮಾಡುವ ಮನಸ್ಸನ್ನು ಸಹಿತ ಹೊಂದಿದ್ದರ ಬಗ್ಗೆ ಸ್ಪಷ್ಟವಾಗಿ ಕಂಡುಬಂದಿರುತ್ತದೆ.

7. ನಂತರ ಆರೋಪಿತರು ಫಾರುಕ್ ವುಲ್ಲಾ ಈತನಿಗೆ ನದಿ ದಂಡೆ ಹತ್ತಿರ ಬನ್ನಿ ಬೋಳಿ ಮಕ್ಕಳ ನಿಮಗೆ ಒಂದು ಗತಿ ಕಾಣುಸುತ್ತೇನೆ ಅಂತ ನುಡಿದಿರುತ್ತಾರೆ. ಮುಜಿಬುಲ್ಲಾರವರು ಮೊಬೈಲ್ ಪಡೆಯಲು ಕಳುಹಿಸಿದ ವ್ಯಕ್ತಿಗಳಾದ ಅಬಿದುಲ್ಲಾ ಮತ್ತು ಫಾರುಕ್ ವುಲ್ಲಾ ಇವರು ಬಂದರೆ ತಮ್ಮ ಬಳಿ ಇರುವ ಚಾಕುಗಳಿಂದ ಚುಚ್ಚಿ ಕೊಲೆ ಮಾಡಿ ಬಿಡೋಣ ಎಂದು ಸಂಚು ರೂಪಿಸಿ ಮಾತನಾಡಿಕೊಂಡಿರುವುದು ಸದರಿ ಪೊಲೀಸರು ಸಲ್ಲಿಸಿದ ದೋಷಾರೋಪಣ ಪಟ್ಟಿಯಿಂದ ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಆರೋಪಿತರು ಕೊಟ್ಟಂತಹ ಸ್ವ ಇಚ್ಛಾ ಹೇಳಿಕೆಯನ್ನು ಪರಿಶೀಲಿಸಲಾಗಿ, ಕೊಲೆ ಮಾಡಲು ಸಂಚು ರೂಪಿಸುವುದರ ಬಗ್ಗೆ ಕೊಲೆ ಮಾಡುವುದರ ಬಗ್ಗೆ ತಯಾರಿ ಮಾಡಿಕೊಂಡಿದ್ದರ ಬಗ್ಗೆ ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಈಗಾಗಲೇ ಪ್ರಾಸಾ.1 ರಿಂದ 8 ಸಾಕ್ಷಿಗಳನ್ನು ವಿಚಾರಣೆ ಮಾಡಿದ್ದು, 1 ನೇ ಆರೋಪಿ ಪರ ವಕೀಲರು ಪಾಟೀ ಸವಾಲನ್ನು ಸಹಿತ ಮಾಡಿದ್ದು, 2 ನೇ ಆರೋಪಿ ವಿರುದ್ಧ ವಿಭಜಿತ ಪ್ರಕರಣ ದಾಖಲಾಗಿದ್ದು, ಈಗ ಆರೋಪಿ 2 ಜಾಮೀನು ಪಡೆದುಕೊಂಡಿದ್ದು, ಈ ಪ್ರಕರಣದಲ್ಲಿ ವಿಲೀನವಾಗಿರುವುದರಿಂದ ಆರೋಪಿತರಿಬ್ಬರೂ ಸೇರಿ ಮೃತ ಫಾರುಕ್ ವುಲ್ಲಾ ಈತನನ್ನು ಕೊಲೆ ಮಾಡುವ ಉದ್ದೇಶ ಇಟ್ಟುಕೊಂಡು ಕೊಲೆ ಮಾಡಿರುತ್ತಾರೆ ಅಂತ ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ನ್ಯಾಯಾಲಯವು ಭಾರತೀಯ ದಂಡ ಸಂಹಿತೆ ಕಲಂ 302 ರಡಿಯಲ್ಲಿ ದೋಷಾರೋಪಣೆ ರಚನೆ ಮಾಡಿದ್ದು ಸೂಕ್ತವಾಗಿರುವುದರಿಂದ ಸದರಿ ರಚನೆಯನ್ನು ಬದಲಾವಣೆ ಮಾಡಲು ಯಾವುದೇ ಸಕಾರಣಗಳು ಇರುವುದಿಲ್ಲ.

8. ಸರ್ಕಾರಿ ಅಭಿಯೋಜಕರು ಹಾಜರುಪಡಿಸಿದ 2024 KHC–D:2742– Sri Shivappa Vs. State of Karnataka and another–– Trial Court can exercise power U/S.216

Cr.P.C. Suo Motu; Application by prosecution /Accused to alter charges not maintainable:Karnataka H.C. ಈ ತೀರ್ಪನ್ನು ಪರಿಶೀಲಿಸಲಾಗಿ, ನ್ಯಾಯಾಲಯವು ದೋಷಾರೋಪಣೆ ರಚನೆ ಬದಲಾವಣೆ ಮಾಡಬೇಕಾದಲ್ಲಿ ಸ್ವತಃ ರಚನೆ ಮಾಡಲು ಅವಕಾಶ ಇರುತ್ತದೆ ಎಂಬುದರ ಬಗ್ಗೆ ಸ್ಪಷ್ಟವಾಗಿ ತೀರ್ಪಿನಲ್ಲಿ ಇರುತ್ತದೆ. ಸದರಿ ತೀರ್ಪಿನಲ್ಲಿ ಪ್ರಕರಣ ಮುಂದೂಡಬೇಕೆಂಬ ಉದ್ದೇಶದಿಂದ ಅರ್ಜಿಯನ್ನು ಸಲ್ಲಿಸುವ ಸಾಧ್ಯತೆ ಇರುತ್ತದೆ ಎಂಬ ಅಂಶವನ್ನು ಸಹಿತ ಸದರಿ ತೀರ್ಪಿನಲ್ಲಿ ತಿಳಿಸಲಾಗಿರುತ್ತದೆ.

9. ಆರೋಪಿ ಪರ ವಕೀಲರು 2017 ಎ.ಐ.ಎ.ಆರ್. (ಕ್ರಿಮಿನಲ್) 420 ಅರ್ಜುನ್ ಮತ್ತು ಇನ್ನೊಬ್ಬ ವಿರುದ್ಧ ಚತ್ತಿಸಗಡ ರಾಜ್ಯ ಸದರಿ ತೀರ್ಪನ್ನು ಪರಿಶೀಲಿಸಲಾಗಿ, ವಿಚಾರಣಾ ನ್ಯಾಯಾಲಯವು ಆರೋಪಿಗೆ ಭಾರತೀಯ ದಂಡ ಸಂಹಿತೆ ಕಲಂ 302 ರಡಿಯಲ್ಲಿ ಶಿಕ್ಷೆ ವಿಧಿಸಿದ್ದು, ಮೇಲ್ಮನವಿ ಸಲ್ಲಿಸಿದಾಗ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಭಾರತೀಯ ದಂಡ ಸಂಹಿತೆ ಕಲಂ 304(II) ಅಡಿಯಲ್ಲಿ ಮಾರ್ಪಾಡು ಮಾಡಿ ಶಿಕ್ಷೆ ವಿಧಿಸಿದ್ದರ ಬಗ್ಗೆ ತೀರ್ಪು ಇರುತ್ತದೆ.

10. ಅದೇ ಪ್ರಕಾರ ಕ್ರಿಮಿನಲ್ ಪಿಟಿಷನ್ ನಂ.1829/2022 ಆನಂದ ವಿರುದ್ಧ ಕರ್ನಾಟಕ ರಾಜ್ಯ ಈ ತೀರ್ಪನ್ನು ಪರಿಶೀಲಿಸಲಾಗಿ, ಪೋಲೀಸರು ತನಿಖೆ ಪೂರ್ತಿಗೊಳಿಸಿ ಭಾರತೀಯ ದಂಡ ಸಂಹಿತೆ ಕಲಂ 366(ಎ), 506 ಸಹ ಕಲಂ 34 ರಡಿಯಲ್ಲಿ ದೋಷಾರೋಪಣ ಪಟ್ಟಿ ಸಲ್ಲಿಸಿದ್ದು, ಸದರಿ ತೀರ್ಪಿನ ಪ್ಯಾರಾ 12 ಮತ್ತು 13 ನ್ನು ಪರಿಶೀಲಿಸಲಾಗಿ, ಲೈಂಗಿಕ ಹಲ್ಲೆ ಉಂಟಾಗಿರುತ್ತದೆ ಅಂತ ಪೋಕ್ಸೊ ಕಲಂ 7 ರಡಿಯಲ್ಲಿ ದೋಷಾರೋಪಣ ಪಟ್ಟಿ ಇರುವುದರಿಂದ ಸದರಿ ಕಲಂಗೆ ಸಂಬಂಧಪಟ್ಟಂತೆ ಹೆಚ್ಚುವರಿಯಾಗಿ ದೋಷಾರೋಪಣೆ ರಚನೆ ಮಾಡಿದ್ದರ ಬಗ್ಗೆ ತೀರ್ಪು ಇರುತ್ತದೆ.

11. ಕ್ರಿಮಿನಲ್ ಅಪೀಲ್ ನಂ.131/2016 ಅನಂತ್ ಪ್ರಕಾಶ್ ಸಿಂಹ ಅಲಿಯಾಸ್ ಅನಂತ್ ಸಿಂಹ ವಿರುದ್ದ ಹರಿಯಾಣ ರಾಜ್ಯ ಈ ತೀರ್ಪಿನ ಪ್ಯಾರಾ 16 ನ್ನು ಪರಿಶೀಲಿಸಲಾಗಿ, ನ್ಯಾಯಾಲಯವು ದೋಷಾರೋಪಣ ಪಟ್ಟಿಯನ್ನು ಪರಿಶೀಲಿಸಿದಾಗ ದೋಷಾರೋಪಣೆ ರಚನೆ ದೋಷಪೂರಿತವಾಗಿದ್ದಾಗ ಅಥವಾ ಕೆಲವು ಕಲಂ ಬಿಟ್ಟು ಹೋಗಿದ್ದಾಗ ಮತ್ತು ದಾಖಲಾತಿಗಳನ್ನು ಪ್ರಥಮ ವರ್ತಮಾನ ವರದಿ ದೂರನ್ನು ಪರಿಶೀಲಿಸಿದಾಗ ಪ್ರಕರಣ ವಿಚಾರಣೆ ನಡೆಯುವ ಸಮಯದಲ್ಲಿ ತೀರ್ಪು ನಡೆಯುವುದಕ್ಕಿಂತ ಪೂರ್ವದಲ್ಲಿ ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ದೊಷಾರೋಪಣೆ ರಚನೆಯಾಗಿಲ್ಲದೇ ಇರುವುದು ನ್ಯಾಯಾಲಯಕ್ಕೆ ಕಂಡುಬಂದಾಗ ಅಂತಹ ಸಂಧರ್ಭದಲ್ಲಿ ಸೂಕ್ತವಾದಂತಹ ನ್ಯಾಯಸಮ್ಮತವಾದಂತಹ ವಿಚಾರಣೆ ನಡೆಯಲು ದೋಷಾರೋಪಣೆ ಬದಲಾವಣೆ ಮಾಡಬಹುದು ಅಂತ ತೀರ್ಪುಗಳು ಇರುತ್ತವೆ. ಸದರಿ ತೀರ್ಪುಗಳನ್ನು ಈ ಕೇಸಿಗೆ ಪರಿಶೀಲಿಸಲಾಗಿ, ನ್ಯಾಯಾಲಯವು ಈಗಾಗಲೇ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 302 ರಡಿಯಲ್ಲಿ ದೋಷಾರೋಪಣೆ ರಚನೆ ಮಾಡಿದ್ದು, ನ್ಯಾಯಸಮ್ಮತವಾಗಿರುತ್ತದೆ. ಸದರಿ ಮೇಲ್ಕಂಡ ತೀರ್ಪಿನಲ್ಲಿ ಇರತಕ್ಕಂತಹ ವಿಧ್ಯಮಾನಗಳು ಈ ಕೇಸಿನ ವಿಧ್ಯಮಾನಗಳು ಬೇರೆ ಇರುವುದರಿಂದ ಸದರಿ ತೀರ್ಪುಗಳು ಈ ಕೇಸಿಗೆ ಈ ಸಮಯದಲ್ಲಿ ಅನ್ವಯವಾಗಲಾರವು.

12. ಒಂದು ವೇಳೆ ಸದರಿ ಪ್ರಕರಣದಲ್ಲಿ ಸಾಕ್ಷಿಗಳು ಮುಗಿದ ನಂತರ ವಾದ ವಿವಾದಗಳು ಮುಗಿದ ನಂತರ ಆರೋಪ ಸಾಬೀತು ಮಾಡುವಾಗ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 302 ರಡಿಯಲ್ಲಿ ಅಪರಾಧ ಮಾಡಿರುತ್ತಾರೋ ಅಥವಾ 304(II) ಅಪರಾಧ ಮಾಡಿರುತ್ತಾರೋ ಎನ್ನುವುದು ನಿರ್ಣಯ ನೀಡುವ ಸಮಯದಲ್ಲಿಯೂ ಸಹಿತ ನ್ಯಾಯಾಲಯವು ಪರಿಗಣಿಸಲು ಕಾನೂನಿನಲ್ಲಿ ಅವಕಾಶ ಇರುತ್ತದೆ. ಆದ್ದರಿಂದ ಈ ಹಂತದಲ್ಲಿ ಆರೋಪಿ ಪರ

ವಕೀಲರು ಸಲ್ಲಿಸಿದಂತಹ ಅರ್ಜಿಯಲ್ಲಿ ಬರೆದ ಕಾರಣಗಳ ಆಧಾರದ ಮೇಲಿಂದ ದೋಷಾರೋಪಣೆ ರಚನೆ ಬದಲಾವಣೆ ಮಾಡಲು ಬರಲಾರದು, ಆದ್ದರಿಂದ ಅಂಶ 1 ನಕಾರಾತ್ಮಕವಾಗಿ ಉತ್ತರಿಸಲಾಯಿತು.

13. **ಅಂಶ 2 ಃ**– ಅಂಶ 1 ಕ್ಕೆ ನೀಡಿದ ಕಾರಣ ಹಾಗೂ ಉತ್ತರಗಳಿಗಾಗಿ ಈ ಕೆಳಕಂಡಂತೆ ಆದೇಶಃ

**ಆದೇಶ**

2 ನೇ ಆರೋಪಿ ಪರ ವಕೀಲರು ದಂಡ ಪ್ರಕ್ರಿಯಾ ಸಂಹಿತೆ ಕಲಂ 216 ರಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ವಜಾ ಮಾಡಲಾಯಿತು.

ಖರ್ಚಿನ ಮೇಲೆ ಯಾವುದೇ ಆದೇಶವಿಲ್ಲ.

(ಈ ಆದೇಶದ ಉಕ್ತಲೇಖನವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರ ಪರದೆಯ ಮೇಲೆ ನೀಡಿದ್ದು, ನಂತರ ಅವರು ಗಣಕೀಕರಿಸಿದ್ದನ್ನು ಓದಿ, ತಿದ್ದಿ ಇದೇ ದಿನಾಂಕಃ 25 ನೇ ಫೆಬ್ರವರಿ ಮಾಹೆ 2025 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

M H ANNAYYANAVAR

Digitally signed by M H ANNAYYANAVAR
Date: 2025.02.25 11:15:14 +0530

(ಎಂ.ಹೆಚ್. ಅಣ್ಣಯ್ಯನವರ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.